

## ಕುಟ್ಟಣದ ಅವಲಕ್ಕಿ

ತೆಳು, ಮಧ್ಯಮ ಮತ್ತು ದಪ್ಪ ಎಂಬುದಾಗಿ ಮೂರು ಬಗೆಗಳಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿರುವ ಅವಲಕ್ಕಿಯು ಕರಾವಳಿ ಕರ್ನಾಟಕದ ಬೆಳಗ್ಗಿನ ಉಪಾಹಾರದ ಅವಿಭಾಜ್ಯ ಅಂಗ. ಅವಲಕ್ಕಿಯನ್ನು ಸಾಮಾನ್ಯವಾಗಿ ಮಿಲ್ಲುಗಳಲ್ಲಿನ ರೋಲರ್ ಯಂತ್ರಗಳಿಂದ ದೊಡ್ಡ ಪ್ರಮಾಣದಲ್ಲಿ ತಯಾರಿಸಲಾಗುತ್ತದೆ. ಆದರೆ, ಹಿಂದಿನ ಕಾಲದಲ್ಲಿ ಗುಡಿ ಕೈಗಾರಿಕೆಯ ಮೂಲಕ ಕರಾವಳಿಯ ಗ್ರಾಮೀಣ ಪ್ರದೇಶಗಳಲ್ಲಿ ಇದನ್ನು ತಯಾರಿಸಲಾಗುತ್ತಿತ್ತು. ಇದಕ್ಕಾಗಿ ವಿದ್ಯುತ್ ಶಕ್ತಿಯ ಅವಶ್ಯಕತೆ ಬೇಕಿರಲಿಲ್ಲ. ಬದಲಿಗೆ ನಮ್ಮ ಪೂರ್ವಜರು ಚಿತ್ರದಲ್ಲಿ ಕಾಣುವ 'ಕುಟ್ಟಣದ ಒರಳು' ಎಂಬ ಮರದ ಸಾಧನವನ್ನು ಕೈಯಾರೆ ತಯಾರಿಸಿದ್ದರು.

ಗುಣಮಟ್ಟದ ಭತ್ತವನ್ನು ಅರ್ಧ ಬೇಯಿಸಿ ಪಾತ್ರೆಯಲ್ಲಿ ಮುಚ್ಚಿಟ್ಟು, ಒಂದು ದಿನವಿಡಿ ನೆನೆಸಬೇಕು. ಮರುದಿನ ಪಾತ್ರೆಯಲ್ಲಿನ ನೀರನ್ನು ಬಸಿದು, ಭತ್ತವನ್ನು ಪ್ರತ್ಯೇಕಿಸಿ, ಮಡಿಕೆಯಲ್ಲಿ ಅದನ್ನು ಚೆನ್ನಾಗಿ ಹುರಿದು ನಂತರ ಒರಳಿನಲ್ಲಿ ಹಾಕಿ ಕುಟ್ಟಬೇಕು. ಆಗ ತಯಾರಾದ ಅವಲಕ್ಕಿಯನ್ನು ಭತ್ತದ ಹೊಟ್ಟಿನ ತೌಡಿನಿಂದ ಪ್ರತ್ಯೇಕಿಸಿ, ಅವಲಕ್ಕಿಯನ್ನು ಸಂಗ್ರಹಿಸಲಾಗುತ್ತಿತ್ತು. ಹೀಗೆ ಹಸ್ತಚಾಲಿತ ವಿಧಾನದಲ್ಲಿ ಕಾರ್ಯನಿರ್ವಹಿಸಿ ಪಡೆದ ಅವಲಕ್ಕಿ 'ಕುಟ್ಟಣದ ಅವಲಕ್ಕಿ'ಯೆಂದು ಕರೆಯಲಾಗುತ್ತದೆ. ಈ ಅವಲಕ್ಕಿಯು ರಚನೆ ಮತ್ತು ವಿನ್ಯಾಸದಲ್ಲಿ ಯಂತ್ರೋತ್ಪಾದಿತ ಅವಲಕ್ಕಿಗಿಂತ ಭಿನ್ನವಾಗಿರುತ್ತದೆ. ಹೆಚ್ಚು ಜೀವಸತ್ವ ಭರಿತ, ಆರೋಗ್ಯಕರ ಹಾಗೂ ರುಚಿಕರವಾಗಿರುತ್ತದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಅಡುಗೆಮನೆಗಳಲ್ಲಿ ಕುಟ್ಟಣದ ಅವಲಕ್ಕಿಯು ಜನಪ್ರಿಯ ತಿನಿಸಾಗಿದೆ.

ಈಗ ಅಪರೂಪವೆನಿಸಿರುವ ಕುಟ್ಟಣದ ಅವಲಕ್ಕಿ ತಯಾರಿಸುವ ಈ ಸಾಧನವು ಮಂಗಳೂರಿನ 'ಪಿಲಿಕುಳ ನಿಸರ್ಗಧಾಮ'ದ ಕುಶಲಕರ್ಮಿ ಧಾಮದಲ್ಲಿ ಕಣ್ಣಿಗೆ ಬಿತ್ತು. ಇಲ್ಲಿ ಮರದ ಒರಳಿನ ಜೊತೆಗೆ ಮಣ್ಣಿನ ಮಡಿಕೆ ಹಾಗೂ ಸಾಂಪ್ರದಾಯಿಕ ಒಲೆಯನ್ನೂ ಗಮನಿಸಬಹುದಾಗಿದೆ.

**–ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

## ಕೃಷ್ಣನ ಬಟರ್ ಬಾಲ್

ಮಹಾಬಲಿಪುರಂನ ಕೃಷ್ಣನ ಬಟರ್ ಬಾಲ್ ಅತ್ಯಂತ ಜನಪ್ರಿಯ ಆಕರ್ಷಣೆ. ಇದನ್ನು ನೋಡಲು ದೂರದ ಸ್ಥಳಗಳಿಂದ ಸಾವಿರಾರು ಪ್ರವಾಸಿಗರು ಬರುತ್ತಾರೆ. ಇದರ ಮೂಲ ಹೆಸರು 'ವಾನ್ ಇರೈಕಲ್'. ಇದನ್ನು ಇಂಗ್ಲಿಷ್‌ನಲ್ಲಿ 'ಸ್ಟೋನ್ ಆಫ್ ಸ್ಕೈ ಗಾಡ್' ಎಂದು ಕರೆಯಲಾಗುತ್ತದೆ. ಜಾರು ಬಂಡೆಯ ಮೇಲೆ ನಿಂತಿರುವ ಬಂಡೆ ಕಂಡು ರಾಜಾ ಚೋಳ ದಂಗಾಗಿದ್ದನಂತೆ. ಈ ಬೃಹತ್ ಕಲ್ಲಿನ ಬಂಡೆಯ ಸಮತೋಲನದಿಂದ ಸ್ಫೂರ್ತಿ ಪಡೆದು, 'ತಂಜಾವೂರು ಬೊಮ್ಮಾಯಿ' ಎಂಬ, ಎಂದಿಗೂ ಬೀಳದ ಮಣ್ಣಿನ ಗೊಂಬೆಗಳ ರಚನೆಗೆ ಕಾರಣವಾಯಿತಂತೆ.

ಇನ್ನು ಬಂಡೆಯು ಅರ್ಧ ಗೋಲಾಕಾರದ ತಳಹದಿ ಹೊಂದಿದ್ದು, ಉರುಳಿಸಲು ಯತ್ನಿಸಿದಾಗಲೆಲ್ಲ, ಅದು ಸಾಧ್ಯವಾಗದೆ ಮತ್ತೆ ಮತ್ತೆ ತನ್ನ ಮೂಲ ಸ್ಥಾನಕ್ಕೇ ಹಿಂದಿರುಗುತ್ತದೆ. ಇದು ಇದರ ವಿಶೇಷ. ಈ ಬಂಡೆಯು ಸುಮಾರು ಆರು ಮೀಟರ್ ಎತ್ತರ, ಐದು ಮೀಟರ್ ಅಗಲವಿದ್ದು, ಸುಮಾರು 250 ಟನ್ ತೂಕವಿದೆ. ಸುಮಾರು 1200 ವರ್ಷಗಳಷ್ಟು ಹಳೆಯದು ಎಂದು ಅಂದಾಜಿಸಲಾಗಿರುವ ಈ ಬಂಡೆಯು ವಿಶ್ವ ಪರಂಪರೆಯ ತಾಣವಾದ ಮಾಮಲ್ಲಪುರಮ್‌ನಲ್ಲಿರುವ ಸ್ಮಾರಕಗಳ ಗುಂಪಿನ ಭಾಗವಾಗಿದೆ. 1908ರಲ್ಲಿ ನಗರದ ಆಗಿನ ಗವರ್ನರ್ ಆರ್ಥರ್ ಹ್ಯಾವ್ಲಾಕ್ ಸುರಕ್ಷತಾ ಕಾಳಜಿಯ ಕಾರಣದಿಂದ ಬಂಡೆಯನ್ನು ಸ್ಥಳಾಂತರಿಸಲು ಏಳು ಆನೆಗಳನ್ನು ಬಳಸಿ ಪ್ರಯತ್ನಿದರೂ ಯಶಸ್ವಿಯಾಗಲಿಲ್ಲವಂತೆ. ಕೃಷ್ಣನ ಬೆಣ್ಣೆಯ ಉಂಡೆ ಎಂದು ಕರೆಯುವ ಈ ದೈತ್ಯ ಬಂಡೆಯು ಗುರುತ್ವಾಕರ್ಷಣೆಗೆ ಮಣಿಯಲು ನಿರಾಕರಿಸುತ್ತದೆ ಎಂದು ಹೇಳಲಾಗಿದೆ.

**–ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ**



## ರಥದ ಮಾದರಿ ಹೂ

ಕರಾವಳಿಯ ಹಚ್ಚ ಹಸುರಿನ ಪಶ್ಚಿಮ ಘಟ್ಟದ ತಪ್ಪಲಿನ ನಡುವೆ ದೇವಸ್ಥಾನಗಳಲ್ಲಿ ಕಂಡು ಬರುವ ರಥವನ್ನು ಹೋಲುವ ಕೆಂಪು ಬಣ್ಣದ ಚೆಲುವು ಈ ಹೂವಿನದ್ದು. ಮನುಷ್ಯನ ಎತ್ತರಕ್ಕೆ ಬೆಳೆಯುವ ಈ ಗಿಡದ ಪ್ರಮುಖ ಆಕರ್ಷಣೆ ರಥ ಮಾದರಿಯ ಸರಾಸರಿ ಒಂದು ಅಡಿಗಳಷ್ಟು ಎತ್ತರ ಬೆಳೆಯುವ ಕೆಂಪು ಹೂ ಬಿಡುವುದು. ಅಗಲ ಎಲೆಯ ಈ ಗಿಡದ ತುದಿಯಲ್ಲಿ ಕೆಂಪು ದಂಡು ಹುಟ್ಟಿಕೊಂಡು ಇದು ಕವಲುಗಳಾಗಿ ಮೂಡಿ ತುದಿಯಲ್ಲಿ ನೂರಾರು ಪುಟ್ಟ ಹೂವುಗಳು ಅರಳುತ್ತವೆ. ಕೆಲ ದಿನಗಳ ಕಾಲ ಈ ಹೂವು ಹಾಗೆಯೇ ಇರುತ್ತದೆ. ತೋಟದ ಅಂಚು, ಕಾಡಿನ ನಡುವೆ ಕಾಣುವ ಈ ಗಿಡ ಬೇಸಿಗೆ ಅಲ್ಲದೇ ಮಳೆಗಾಲದ ಹೂವಿನ ಬರ ಇರುವ ಸಮಯದಲ್ಲೂ ಅರಳುತ್ತದೆ. ಯಾವುದೇ ಹೂ ಅರಳದ ಮಳೆಗಾಲದ ಸಮಯದಲ್ಲಿ ಇದರಿಂದ ಆಹಾರದ ಅಭಾವ ಇರುವ ವೇಳೆಯೂ ಚಿಟ್ಟೆಗಳಿಗೆ ಮಕರಂದ ದೊರೆಯುತ್ತದೆ. ಇದನ್ನು ಸ್ಥಳೀಯವಾಗಿ ಬೆಳ್ತಂಗಡಿ ತಾಲ್ಲೂಕು ಸುತ್ತಮುತ್ತ 'ರಥ ಹೂ' ಎಂದೇ ಕರೆಯಲಾಗುತ್ತದೆ.

**–ಅರುಣ್ ಕಿಲ್ಲೂರು**

